<u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ರಾಮನಗರ.</u>

<u>ಸಿ.ಸಿ. ನಂ.30/2022</u>

CW-3/PW-3

| | | |
|---|---|---|
| ಹೆಸರು | : | ಪುನೀತ್ |
| ತಂದೆ ಹೆಸರು | : | ಕೃಷ್ಣ |
| ವಯಸ್ಸು | : | 26 ವರ್ಷ |
| ವೃತ್ತಿ | : | ವ್ಯಾಪಾರ |
| ವಾಸ ಸ್ಥಳ | : | ಐಜೂರು |
| ದಿನಾಂಕ | : | 26-02-2026. |

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-</u>

ಸಾಕ್ಷಿಗೆ ನಿಪಿ-4 ಪಂಚನಾಮೆಯನ್ನು ತೋರಿಸಲಾಗಿ ಅದರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ನಿಪಿ-ರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ-4(ಬಿ) ಎಂದು ಗುರುತಿಸಲಾಯಿತು. 4-5 ವರ್ಷಗಳ ಹಿಂದೆ ಐಜೂರಿನ ಮಲ್ಲೇಶ್ವರ ಬಡಾವಣೆಯ ಮಲ್ಲೇಶ್ವರ ದೇವಸ್ಥಾನದ ಹಿಂಭಾಗ ಕಳ್ಳತನದ ವಿಚಾರವಾಗಿ ಪೊಲೀಸರು ಮಹಜರ್‌ಗೆ ಬಂದಿದ್ದರು. ನನ್ನ ಮುಂದೆ ಮಹಜರ್ ಮಾಡಿದರು. ನಾನು ಸ್ಥಳದಲ್ಲೇ ಸಹಿ ಮಾಡಿರುತ್ತೇನೆ. ನನ್ನ ಜೊತೆ ಮಹಜರ್ ಗೆ ಚಾಸಾ-4 ಶರಣ್ ರವರು ಸಹಿ ಮಾಡಿದರು. ಪೊಲೀಸರು ಮಹಜರ ಗೆ ಬರಬೇಕೆಂದು ನನಗೆ ನೋಟಿಸ್ ಕೊಟ್ಟಿದ್ದರು. ಸದರಿ ನೋಟಿಸ್‌ನ ಪ್ರತಿಯನ್ನು ಈಗ ನೋಡುತ್ತಿದ್ದು, ಅದನ್ನು ಈಗ ನಿಪಿ-7 ಎಂದು, ನನ್ನ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಿರುತ್ತೇನೆ.

<u>ಪಾಟೀ ಸವಾಲು ಆರೋಪಿ ಪರ ಶ್ರೀ ಹೆಚ್.ಎಸ್., ವಕೀಲರಿಂದಃ-</u>

ನಾನು ಪದವಿ ಮಾಡಿದ್ದೇನೆ. ನಾನು ಈ ದಿನ ನ್ಯಾಯಾಲಯಕ್ಕೆ ಚಾಸಾ-1, ಚಾಸಾ-2 ಮತ್ತು ಚಾಸಾ-4ರವರ ಜೊತೆ ಬಂದೆ. ಸದರಿ ಮೂರು ಜನರೇ

ನನ್ನನ್ನು ಈ ದಿನ ನ್ಯಾಯಾಲಯಕ್ಕೆ ಕರೆದುಕೊಂಡು ಬಂದರು ಎಂದರೆ ಸರಿಯಲ್ಲ. ಚಾಸಾ-4 ನನ್ನ ಶಾಲಾ ಸ್ನೇಹಿತ. ಚಾಸಾ-4ರವರು ಚಾಸಾ-2ರವರ ಮಗ. ಕೃತ್ಯ ನಡೆದ ಸ್ಥಳಕ್ಕೂ, ನಮ್ಮ ಮನೆಗೂ ಅರ್ಧ ಕಿಲೋ ಮೀಟರ್ ದೂರ. ನಿಪಿ-4 ಕಂಪ್ಯೂಟರ್‌ನ ಪ್ರತಿ ಎಂದರೆ ಸರಿ. ನಿಪಿ-4ನ್ನು ಪೊಲೀಸ್ ಠಾಣೆಯಲ್ಲಿ ಪ್ರಿಂಟ್ ತೆಗೆದಿರುವುದು ಎಂದರೆ ಗೊತ್ತಿಲ್ಲ. ನಿಪಿ-4ಕ್ಕೆ ನಾನು ಪೊಲೀಸ್ ಠಾಣೆಯಲ್ಲೇ ಸಹಿ ಹಾಕಿದ್ದು ಎಂದರೆ ಸರಿಯಲ್ಲ. ಮಹಜರ್ ಮಾಡಲು ಯಾರು ಯಾರು ಬಂದಿದ್ದರು ಎಂದು ಅವರ ಹೆಸರು ನನಗೆ ಗೊತ್ತಿಲ್ಲ, ಆದರೆ ಪೊಲೀಸರು ಬಂದಿದ್ದರು. ನಿಪಿ-4 ಮಹಜರನ್ನು ಟೈಪ್ ಮಾಡಿದ್ದನ್ನು ನಾನು ನೋಡಿಲ್ಲ. ನಿಪಿ-4ರಲ್ಲಿ ಏನು ಟೈಪ್ ಮಾಡಿದ್ದಾರೆಂದು ಗೊತ್ತಿಲ್ಲ. ನನಗೆ ಯಾವುದೇ ವಿಷಯ ಗೊತ್ತಿಲ್ಲದಿದ್ದರೂ ಸಹ ಚಾಸಾ-1, ಚಾಸಾ-2 ಮತ್ತು ಚಾಸಾ-4ರವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು.
ರಾಮನಗರ.